ದಿನಾಂಕ: ಮಾರ್ಚ್ 03, 2014

# ಬಿಹಾರ್‌ಗೆ ವಿಶೇಷ ವರ್ಗೀಕೃತ ಸ್ಥಾನಮಾನ


**-ಅರುಣ್ ಜೇಟ್ಲಿ**

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)


ಅನ್ಯ ರಾಜ್ಯಗಳಿಗೆ ಹೋಲಿಸಿದರೆ ಆರ್ಥಿಕವಾಗಿ ಪ್ರಗತಿ ಸಾಧಿಸದ ಹಲವಾರು ರಾಜ್ಯಗಳನ್ನು ದೇಶದ ಪೂರ್ವದಲ್ಲಿ ನೋಡಬಹುದು. ಈ ರಾಜ್ಯಗಳೂ ಪ್ರತಿಕೂಲ ನೈಸರ್ಗಿಕ ಪರಿಸ್ಥಿತಿಗಳನ್ನು ಎದುರಿಸುತ್ತಿವೆ. ಅವುಗಳ ಸಂಪನ್ಮೂಲ ಕ್ರೋಢೀಕರಣ ಅಸಮರ್ಪಕವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ಹೆಚ್ಚಿನ ಅನುದಾನ ಮತ್ತು ಆದಾಯ ಹಂಚಿಕೆ ಪಡೆಯಲು ವಿಶೇಷ ವರ್ಗೀಕರಣ ಸ್ಥಾನಮಾನ ಪಡೆಯುವ ಎಲ್ಲಾ ಅಗತ್ಯಗಳು ಈ ರಾಜ್ಯಗಳಿಗಿವೆ.

ವಿಶೇಷ ವರ್ಗೀಕರಣ ಸ್ಥಾನಮಾನ ಪಡೆಯುವ ಅಭಿಲಾಷೆಯನ್ನು ಹೊಂದಿದ ರಾಜ್ಯಗಳಲ್ಲಿ ಬಿಹಾರ್ ರಾಜ್ಯವೂ ಒಂದು. ಬಿಹಾರ್ ರಾಜ್ಯವನ್ನು ತುಂಡರಿಸಿ ಜಾರ್ಖಂಡ್ ರಾಜ್ಯವನ್ನು ಸೃಷ್ಟಿಸಿದ ನಂತರ ನೈಸರ್ಗಿಕ ಸಂಪನ್ಮೂಲಗಳು ಜಾರ್ಖಂಡ್ ಪಾಲಾದವು. ಈ ಕೆಲವು ವರ್ಷಗಳಿಂದ ಬಿಹಾರ್‌ನ ಎನ್‌ಡಿಎ ಸರ್ಕಾರ ಬಿಹಾರ್ ರಾಜ್ಯಕ್ಕೆ ವಿಶೇಷ ವರ್ಗೀಕೃತ ಸ್ಥಾನಮಾನ ನೀಡಬೇಕೆಂದು ಸತತವಾಗಿ ಒತ್ತಾಯಿಸುತ್ತಾ ಬಂದಿತ್ತು. ಬಿಹಾರ್‌ನ ಎಲ್ಲಾ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಒಂದೇ ಅಭಿಪ್ರಾಯ ಹೊಂದಿವೆ. ಬಿಹಾರ್‌ಗೆ ವಿಶೇಷ ವರ್ಗೀಕೃತ ಸ್ಥಾನಮಾನ ನೀಡುವುದಾಗಿ ಕಾಂಗ್ರೆಸ್ ಪಕ್ಷ ಕಳೆದ ಎರಡು ವರ್ಷಗಳಿಂದ ಜೆಡಿ(ಯು)ಗೆ ಓಲೈಸಲು ಪ್ರಯತ್ನಿಸಿತ್ತು. ಬಿಹಾರ್‌ಗೆ ವಿಶೇಷ ವರ್ಗೀಕೃತ ಸ್ಥಾನಮಾನ ನೀಡುವ ಕುರಿತು ಪರಿಶೀಲಿಸಲು ಸರ್ಕಾರ ಸಮಿತಿಯೊಂದನ್ನು ರಚಿಸಲಿದೆ ಎಂದು ಹಣಕಾಸು ಸಚಿವರು ತಮ್ಮ 2013ರ ಆಯವ್ಯಯ ಭಾಷಣದಲ್ಲಿ ಸೂಚಿಸಿದ್ದರು. ಬಿಹಾರ್ ರಾಜ್ಯದ ಆರ್ಥಿಕ ಅಗತ್ಯತೆ ಬದಲು ರಾಜಕೀಯ ಲಾಭ ಗಳಿಸುವ ಉದ್ದೇಶದಿಂದ ಈ ಭರವಸೆ ನೀಡಲಾಗಿತ್ತು. ಬಿಹಾರ್‌ಗೆ ವಿಶೇಷ ವರ್ಗೀಕೃತ ಸ್ಥಾನಮಾನ ನೀಡುವ ಲೋಭದೊಂದಿಗೆ ಜೆಡಿ(ಯು) ಮನವೊಲಿಸುವ ದುರುದ್ದೇಶ ಯುಪಿಎ ಸರ್ಕಾರದ್ದಾಗಿತ್ತು. ಈ ಲೋಭಕ್ಕೆ ಜೆಡಿ(ಯು)ನ ನುರಿತ ನಾಯಕರು ಹೇಗೆ ತುತ್ತಾದರು ಎಂಬುದು ಅರ್ಥವಾಗದು. ಕಾಕತಾಳಿಯ ಎಂಬಂತೆ, ಲೋಭ ತೋರಿದ ಸ್ವಲ್ಪ ಸಮಯದಲ್ಲೇ ಜೆಡಿ(ಯು) ಮತ್ತು ಭಾಜಪ ಸಂಬಂಧ ಮುರಿದುಬಿದ್ದಿತು. ಜೆಡಿ(ಯು) ಪ್ರತ್ಯೇಕಗೊಂಡ ನಂತರವೂ ವಿಶೇಷ ವರ್ಗೀಕೃತ ಸ್ಥಾನಮಾನ ದೊರೆಯಲಿಲ್ಲ. ಆರ್‌ಜೆಡಿ ಮತ್ತು ಜೆಡಿ(ಯು) ನಡುವೆಯ ಸ್ವಯಂವರದಲ್ಲಿ, ಕಾಂಗ್ರೆಸ್ ಪಕ್ಷವು ಆರ್‌ಜೆಡಿಯನ್ನೇ ಆಯ್ಕೆ ಮಾಡಿಕೊಂಡಿತು. ಪತ್ರಿಕಾ ವರದಿಗಳ ಪ್ರಕಾರ, ಆರ್‌ಜೆಡಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಸ್ಪರ್ಧಿಸುವ ಸೀಟುಗಳ ಹೊಂದಾಣಿಕೆ ಇಕ್ಕಟ್ಟಿನಲ್ಲಿದೆ. ವಿಶೇಷ ವರ್ಗೀಕೃತ ಸ್ಥಾನಮಾನ ನೀಡಬೇಕೆಂದು ಜೆಡಿ(ಯು) ರಾಜ್ಯವ್ಯಾಪಿ ಪ್ರತಿಭಟನೆ ಏರ್ಪಡಿಸಿತ್ತು. ವಿಶೇಷ ವರ್ಗೀಕೃತ ಸ್ಥಾನಮಾನ ವಿಚಾರದಲ್ಲಿ ಇಬ್ಬಗೆ ನೀತಿ ಅನುಸರಿಸುವ ಕಾಂಗ್ರೆಸ್‌ನೊಂದಿಗೆ ಜೆಡಿ(ಯು) ಚುನಾವಣಾ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಮಾಧ್ಯಮಗಳು ಸೂಚ್ಯವಾಗಿ ವರದಿ ಮಾಡುತ್ತಿವೆ.

*****